ಮಾಡಿ ನಾವು ರಸ್ತೆ ದುರಸ್ತಿ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಡಿ.ಆರ್. ಪಾಟೀಲ್ ಬಂದಿಲ್ಲ.... ಸಿಎಸ್ ಪುಟ್ಟರಾಜು..

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೫೯

ಮಾನ್ಯ ಸದಸ್ಯರ ಹೆಸರು : ಶ್ರೀ ಪುಟ್ಟರಾಜು ಸಿ.ಎಸ್. (ಪಾಂಡವಪುರ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ
(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಪ್ರಶ್ನೆ

ಅ) ಬೀದರ್-ಶ್ರೀರಂಗಪಟ್ಟಣ ರಸ್ತೆ ವಯಾ ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ ಕಾಮಗಾರಿ ಸ್ಥಗಿತಗೊಂಡಿರುವುದಕ್ಕೆ ಕಾರಣವೇನು;

ಉತ್ತರ

ಅ) ಕಾಮಗಾರಿಗಳನ್ನು ಗುತ್ತಿಗೆದಾರರು ಕಾಮಗಾರಿಯ ಕಾರ್ಯಕ್ರಮಕ್ಕೆ ಅನುಗುಣವಾಗಿ ಕೆಲಸವನ್ನು ನಿರ್ವಹಿಸದೇ ಸ್ಥಗಿತಗೊಳಿಸಿದ್ದು ಇದಕ್ಕೆ ಗುತ್ತಿಗೆದಾರರೇ ಕಾರಣರಾಗಿರುತ್ತಾರೆ.

ಪ್ರಶ್ನೆ

ಆ) ಈ ರಸ್ತೆ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು:

ಉತ್ತರ

ಆ) ಈ ರಸ್ತೆ ಕಾಮಗಾರಿಯನ್ನು ಡಿಸೆಂಬರ್ ೨೦೦೬ರೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಪ್ರಶ್ನೆ

ಇ) ಕಾಮಗಾರಿ ಸ್ಥಗಿತಗೊಳಿಸಿರುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

ಉತ್ತರ

ಮಂದಗತಿಯ ನಿಮಿತ್ತ ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಕಾಮಗಾರಿಗಳನ್ನು ಮುಗಿಸಲು ವಿಫಲರಾಗಿದ್ದರಿಂದ ಗುತ್ತಿಗೆ ಕರಾರಿನ ಪ್ರಕಾರ ಲಿಕ್ವಿಡೇಟೆಡ್ ಡ್ಯಾಮೇಜಸ್ (ದಂಡ) ಅನ್ನು ಸಹ ವಿಧಿಸಲಾಗಿದೆ. ಗುತ್ತಿಗೆ ಕರಾರಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಿ.ಎಸ್. ಪುಟ್ಟರಾಜು : ಶ್ರೀರಂಗಪಟ್ಟಣ ಬೀದರ್ ರಸ್ತೆ ಕಳೆದ ನಾಲ್ಕೈದು ವರ್ಷಗಳಿಂದ ಕೆಲಸ ಪ್ರಾರಂಭ ಆಗಿತ್ತು, ಯಾವ ರೀತಿ ಆ ರಸ್ತೆ ಕೆಲಸ ಕುಂಠಿತವಾಗಿ ನಡೆಯುತ್ತಿದೆ ಎನ್ನತಕ್ಕಂಥದ್ದು ತಾವು ತಮ್ಮ ಮತ ಕ್ಷೇತ್ರಕ್ಕೆ ಹೋಗುವಂತಹ ಸಂದರ್ಭದಲ್ಲಿ

ಖುದ್ದಾಗಿ ತಾವೇ ನೋಡಿರತಕ್ಕಂಥದ್ದು ನಾವು ಕಂಡಿದ್ದೇವೆ. ಆದರೆ ನಾವು ಜನಪ್ರತಿನಿಧಿಗಳಾಗಿ ಈ ತಾಂತ್ರಿಕ ವ್ಯವಸ್ಥೆಯಲ್ಲಿ ಅವರು ಯಾವ ಗುಣಮಟ್ಟದ ಕೆಲಸವನ್ನು ಆ ರಸ್ತೆಯಲ್ಲಿ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದನ್ನು ನಾವು ಕಣ್ಣಿನಿಂದ ನೋಡಿದರೂ ಸಹ ಹೇಗಾದರೂ ಆ ಕೆಲಸ ಪೂರ್ಣ ಆಗಲಿ ಎಂದು ಜನಗಳಿಂದ ನಾವು ಬೈಯಿಸಿಕೊಳ್ಳುವುದಾದರೂ ತಪ್ಪಲಿ ಎನ್ನುವ ಒಂದು ನಿಟ್ಟಿನಲ್ಲಿ ಕಳಪೆ ಮಟ್ಟದ ಕೆಲಸ ನಡೆಯುತ್ತಿದ್ದರೂ ಸಹ ನಾವು ತಲೆ ತಗ್ಗಿಸಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಲ್ಲಿಯೂ ವಿಶೇಷವಾಗಿ ಪಾಂಡವಪುರ ರೈಲ್ವೆ ಸ್ಟೇಷನ್ ಜಂಕ್ಷನ್‌ನಿಂದ ಶ್ರೀರಂಗಪಟ್ಟಣಕ್ಕೆ ಹೋಗತಕ್ಕಂತ ನಾಲ್ಕೂವರೆ ಕಿ.ಮಿ. ರಸ್ತೆ ಏನಿದೆ ಅದನ್ನು ಇದ್ದಂತಹ ಟಾರ್ ಕಿತ್ತು ಹಾಕಿ ಮಣ್ಣು ಕೆಲಸ ಮಾಡಿ ಕಳೆದ ನಾಲ್ಕೈದು ತಿಂಗಳುಗಳಿಂದ ಒಂದು ನಿಮಿಷಕ್ಕೆ ೧೦ ರಿಂದ ೨೦ ವೆಹಿಕಲ್ ಅಲ್ಲಿ ಪಾಸ್ ಆಗುತ್ತವೆ. ಒಂದು ಸಲ ಒಂದು ವೆಹಿಕಲ್ ಹೋದರೆ ಏಳತಕ್ಕಂತಹ ದೂಳಿನಿಂದ ಸಾರ್ವಜನಿಕರು ಇವತ್ತು ಜನ ಪ್ರತಿನಿಧಿಗಳಿಗೆ ಬೈಯ್ಯುವುದರ ಜೊತೆಗೆ ಹಲವಾರು ರಸ್ತೆ ತಡೆ ಕಾರ್ಯಕ್ರಮಗಳನ್ನು ಸಹ ಅಲ್ಲಿ ಮಾಡಿದ್ದಾರೆ. ಹಾಗಾಗಿ ಸನ್ಮಾನ್ಯ ಸಚಿವರು ಸಹ ಸ್ಥಳ ಪರಿಶೀಲನೆ ಮಾಡಿ ತಕ್ಷಣ ಕೆಲಸ ಪ್ರಾರಂಭ ಮಾಡುತ್ತಾರೆಂದು ಭರವಸೆ ಕೊಟ್ಟಿದ್ದರೂ ಸಹ ಯಾವ ಕಾರಣದಿಂದ ನಿಂತಿದೆ ಎಂದು ನಮಗೆ ಅರ್ಥವಾಗುತ್ತಿಲ್ಲ. ದಯಮಾಡಿ ಆ ಕೆಲಸವನ್ನು ತಾವು ತ್ವರಿತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಆ ಕೆಲಸ ಪ್ರಾರಂಭ ಆಗಬೇಕು ಎನ್ನತಕ್ಕಂಥದ್ದನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಆ ರಸ್ತೆಯನ್ನು ಟೆಂಡರ್ ಮುಖೇನ ಒಂದು ಮೂರು – ನಾಲ್ಕು ವರ್ಷದ ಹಿಂದೆ ಈ ಕೆಲಸವನ್ನು ಗುತ್ತಿಗೆ ಕೊಟ್ಟಿದ್ದರು. ಆದರೆ ಆ ಕಂಟ್ರಾಕ್ಟರ್ ಸರಿಯಾದ ರೀತಿಯಲ್ಲಿ ಇಲ್ಲದೆ ಇರುವುದರಿಂದ ಆ ಗುತ್ತಿಗೆ ರದ್ದು ಮಾಡಬೇಕೆಂದು ಈಗಾಗಲೇ ನಮ್ಮ ಇಲಾಖಾ ಮುಖ್ಯಸ್ಥರು ಕಳುಹಿಸಿ ಕೊಟ್ಟಿದ್ದಾರೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಏಕೆಂದರೆ, ಕ್ವಾಲಿಟಿ ಸರಿ ಇಲ್ಲ ಎಂದರೆ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ. ಮತ್ತು ಈ ಕೆಲಸದ ಕೆಲವು ಕೇಸ್‌ಗಳು ಕೋರ್ಟ್‌ನಲ್ಲಿ ಇವೆ. ಅದನ್ನು ಪರಿಶೀಲನೆ ಮಾಡಿ ಯಾವ ರೀತಿ ಕಂಟ್ರಾಕ್ಟರ್ ರಿಸೆಟ್ ಮಾಡಿ ಕ್ರಮ ತೆಗೆದುಕೊಳ್ಳಬೇಕು, ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಅವರ ಪ್ರಶ್ನೆ ಏನೆಂದರೆ ಕಳಪೆ ಕೆಲಸ ಆಗುತ್ತಿರುವುದು ಒಂದು, ನಿಧಾನ ಗತಿಯ ಕೆಲಸ ಆಗುತ್ತಿರುವುದು ಒಂದು ಏನೂ ಕೆಲಸ ಆಗುತ್ತಿಲ್ಲ. ಆದ್ದರಿಂದ ವಾಹನ ಚಾಲಕರಿಗೆ ಮತ್ತು ಜನರಿಗೆ ಎಲ್ಲರಿಗೂ ತೊಂದರೆಯಾಗುತ್ತಿದೆ. ಆದ್ದರಿಂದ ಒಂದು ನಿಗದಿತ ಅವಧಿಯಲ್ಲಿ ಎಷ್ಟು ದಿವಸದಲ್ಲಿ ಕೆಲಸ ಮಾಡುತ್ತೀರಿ ಎಂದು

ಕೇಳುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಂಟ್ರ್ಯಾಕ್ಟರ್ಸ್‌ಗೆ ನಾಲ್ಕೈದು ಬಾರಿ ನೋಟೀಸ್ ಕೊಟ್ಟಿದೆ. ಐದಾರು ಬಾರಿ ನೋಟೀಸನ್ನು ಕಂಟ್ರ್ಯಾಕ್ಟರ್ಸ್‌ಗೆ ನಮ್ಮ ಅಧಿಕಾರಿಗಳು ಕೊಟ್ಟರೂ ಕೂಡ ಅವರು ಕೆಲಸವನ್ನು ಮಾಡುತ್ತಿಲ್ಲ. ಆದುದರಿಂದ ಈಗ ಕಂಟ್ರ್ಯಾಕ್ಟರ್‌ನ್ನು ರೀಸೆಟ್ ಮಾಡಿ ಬೇರೆ ಕಂಟ್ರ್ಯಾಕ್ಟರ್‌ಗಳನ್ನು ವಹಿಸುವುದಕ್ಕೆ ಪ್ರಸ್ತಾವನೆಯನ್ನು ಇಲಾಖೆಯ ಅಧಿಕಾರಿಗಳು ಕಳುಹಿಸಿದ್ದಾರೆ. ಅದರಂತೆ ಕ್ರಮ ತೆಗೆದುಕೊಂಡು ಬೇರೆ ಕಡೆಯಿಂದ ಮಾಡಿಸುತ್ತೇವೆ.

ಶ್ರೀ ಸಿ.ಎಸ್. ಪುಟ್ಟರಾಜು : ಕೋರ್ಟ್‌ನಲ್ಲೋ ಮತ್ತೊಂದರಲ್ಲೋ ಏನಾದರೂ ಒಂದು ತೀರ್ಮಾನ ಮಾಡಿ ತೆಗೆದುಕೊಳ್ಳಬಹುದು. ಆದರೆ ತಾತ್ಕಾಲಿಕವಾಗಿ ವ್ಯವಸ್ಥೆಯನ್ನು ಅಲ್ಲಿ ಮಾಡದಿದ್ದರೆ ನೀವೂ ಸೇರಿದ ಹಾಗೆ ಮುಂದಿನ ದಿನಗಳಲ್ಲಿ ಪ್ರತಿನಿಧಿಗಳಾದ ನಾವುಗಳು ಅಲ್ಲಿ ಓಡಾಡುವುದಕ್ಕೆ ಅಲ್ಲಿಯ ಜನರು ಬಿಡುವುದಿಲ್ಲ. ದಯಮಾಡಿ ತಾತ್ಕಾಲಿಕವಾಗಿ ವ್ಯವಸ್ಥೆಯನ್ನು ಅಲ್ಲಿ ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸದನದಲ್ಲಿ ಮಾನ್ಯ ಸಚಿವರು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ತಾತ್ಕಾಲಿಕವಾಗಿ ಕಾನೂನಿನ ರೀತಿಯಲ್ಲಿ ಏನಿದೆಯೋ ಅದರಂತೆ ಅದನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.